# 9ನೇ ತರಗತಿ ಕನ್ನಡ ಸಿರಿಯನಿನ್ನೇನ ಬಣ್ಣಿಪೆನು ನೋಟ್ಸ್ - kannadapdf.com

ತರಗತಿ : 9ನೇ ತರಗತಿ

ಪದ್ಯದ ಹೆಸರು : ಸಿರಿಯನಿನ್ನೇನ ಬಣ್ಣಿಪೆನು

ಕೃತಿಕಾರರ ಹೆಸರು : ರತ್ನಾಕರವರ್ಣಿ

## ಕೃತಿಕಾರರ ಪರಿಚಯ :

ರತ್ನಾಕರವರ್ಣಿ

* ರತ್ನಾಕರವರ್ಣಿಯ ಕಾಲ ಸುಮಾರು ಕ್ರಿಸ್ತ ಶಕ ೧೫೬೦. ಈತನ ಸ್ಥಳ ದಕ್ಷಿಣಕನ್ನಡ ಜಿಲ್ಲೆ ಮೂಡುಬಿದರೆ , ಕನ್ನಡ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದ ಇವನು ಸಾಂಗತ್ಯದಲ್ಲಿ ' ಭರತೇಶ ವೈಭವ ' ಎಂಬ ಬೃಹತ್ ಕಾವ್ಯವನ್ನು ರಚಿಸಿದ್ದಾನೆ . ಇವನು ತಾಳಪ್ರದೇಶದ ಭೈರರಸ ಒಡೆಯರ ಆಸ್ಥಾನದಲ್ಲಿ ' ಶೃಂಗಾರಕವಿ ' ಎಂದು ಹೆಸರಾಗಿದ್ದನು .

* ಈತನ ಪ್ರಮುಖ ಕೃತಿಗಳೆಂದರೆ : ಭರತೇಶವೈಭವ , ಅಪರಾಜಿತೇಶ್ವರ ಶತಕ , ತ್ರಿಲೋಕಶತಕ , ರತ್ನಾಕರಾಧೀಶ್ವರಶತಕ

* ಇವಲ್ಲದೆ ಸುಮಾರು ಎರಡುಸಾವಿರ ಸಾಂಪ್ರದಾಯಿಕ ಹಾಡುಗಳನ್ನು ರಚಿಸಿದ್ದು , ಅವು ಅಧ್ಯಾತ್ಮ ಗೀತಗಳೆಂದು ಪ್ರಸಿದ್ಧವಾಗಿವೆ .

## ಅ ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ .

**1.** ಭರತ ಚಕ್ರವರ್ತಿ ಓಲಗಕ್ಕೆ ಹೇಗೆ ಬರುತ್ತಾನೆ **?**

ಉತ್ತರ : ಭರತ ಚಕ್ರವರ್ತಿಯು ಸೂರ್ಯೋದಯ ಸಮಯದಲ್ಲಿ ಎದ್ದು ದೇವರ ಪೂಜೆಮಾಡಿ ಓಲಗಕ್ಕೆ ಬರುತ್ತಾನೆ .

**2.** ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು **?**

ಉತ್ತರ : ದೇವೇಂದ್ರನು ರತ್ನಪುಷ್ಪಕದಲ್ಲಿ ಶೋಭಿಸುವಂತೆ ಭರತ ಚಕ್ರವರ್ತಿಯು ಆಸ್ಥಾನದಲ್ಲಿ ಕಾಂತಿಯಿಂದ ಶೋಭಿಸಿದನು .

**3.** ಭರತೇಶವೈಭವ ಕಾವ್ಯದ ಕರ್ತೃ ಯಾರು **?**

ಉತ್ತರ : ಭರತೇಶವೈಭವ ಕಾವ್ಯದ ಕರ್ತೃ ರತ್ನಾಕರವರ್ಣಿ

**4.** ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು ಯಾವುವು **?**

ಉತ್ತರ : ಭರತನನ್ನು ಹೊಗಳುತ್ತಿದ್ದ ಮೂರು ಲೋಕಗಳು : ಸ್ವರ್ಗ , ಮರ್ತ್ಯ ಮತ್ತು ಪಾತಾಳ

**5.** ತುಂಬಿದ ಸಭೆಯು ಮೈಮರೆತು ಕಾತುರರಾಗಿದ್ದುದಕ್ಕೆ ಕಾರಣವೇನು **?**

| | |
|---|---|
| Download: Kannadapdf.com | https://kannadapdf.com/ |

kannadapdf.com

ಉತ್ತರ : ತುಂಬಿದ ಸಭೆಯು ಭರತ ಚಕ್ರವರ್ತಿಯನ್ನು ನೋಡುವುದಕ್ಕಾಗಿ ಮೈಮರೆತು ಕಾತುರರಾಗಿದ್ದರು .

## ಆ ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

**1.** ಭರತ ಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ .

ಉತ್ತರ : ಭರತಚಕ್ರವರ್ತಿಯು ನವರತ್ನ ಹಾಗೂ ಚಿನ್ನದಿಂದ ನಿರ್ಮಿತವಾಗಿದ್ದ ಆಸ್ಥಾನ ಭವನದಲ್ಲಿ , ಸ್ವರ್ಗ ಲೋಕದಲ್ಲಿ ದೇವೇಂದ್ರನು ರತ್ನಪುಷ್ಪಕ ಸಿಂಹಾಸನದಲ್ಲಿ ಶೋಭಿಸುವಂತೆ ಆಸ್ಥಾನದಲ್ಲಿ ಭರತ ಚಕ್ರವರ್ತಿಯು ಕಾಂತಿಯಿಂದ ಶೋಭಿಸಿದನು . ಅಲ್ಲದೆ ಚಾಮರಗಳ ಸಾಲಿನಲ್ಲಿ ಭರತ ಚಕ್ರವರ್ತಿಯು ' ಆಗಸದಲ್ಲಿ ತೇಲುವ ಬಿಳಿ ಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ ಚಂದ್ರನೋ ಸೂರ್ಯನೋ ' ಎಂಬಂತೆ ಕಂಗೊಳಿಸಿದನು .

**2.** ಧ್ಯಾನ ಬೇಸರಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾನೆ **?**

ಉತ್ತರ : ಭರತ ಚಕ್ರವರ್ತಿಯು " ಗುರುವೇ , ಧ್ಯಾನಮಾಡುವುದಕ್ಕೆ ನನಗೆ ಬೇಸರವಾದಾಗ ನಾನು ನಿನ್ನನ್ನು ಮೊದಲು ಮಾಡಿಕೊಂಡು ಕನ್ನಡದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ . ನನ್ನೊಡೆಯನೇ ಅದು ನಿನ್ನಾಜ್ಞೆ " ಎಂದು ದೇವರಲ್ಲಿ ಪ್ರಾರ್ಥಿಸುತ್ತಾನೆ .

**3.** ಬೇರೆಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು **?**

ಉತ್ತರ : ಕವಿ ರತ್ನಾಕರವರ್ಣಿಯು ತಾನು ಬರೆಯುವ ಕಥೆಯನ್ನು ಆಹಾ ಬಹಳ ಚೆನ್ನಾಗಿದೆ ' ಎಂದು ಕನ್ನಡಿಗರು , ' ರಯ್ಯಾ ಮಂಚಿದಿ ' ( ಬಹಳ ಒಳ್ಳೆಯದು ) ಎಂದು ತೆಲುಗರು , ' ಎಂಚ ಪೊರ್ಲಾಂಡ್ ' ( ಬಹಳ ಚಂದವಾಯಿತು ) ಎಂದು ತುಳುವರು ಅತ್ಯಾಸಕ್ತಿಯಿಂದ ಕೇಳಿ ಹೊಗಳಬೇಕು ಎಂದು ಬಯಸಿದ್ದಾನೆ .

## ಇ ] ಕೊಟ್ಟಿರುವ ಪ್ರಶ್ನೆಗೆ ಏಳು - ಎಂಟು ವಾಕ್ಯಗಳಲ್ಲಿ ಉತ್ತರಿಸಿ.

**1.** ಭರತ ಚಕ್ರವರ್ತಿಯ ರಾಜದರ್ಬಾರಿನ ವೈಭವವನ್ನು ವಿವರಿಸಿ .

ಉತ್ತರ : ಭರತ ಚಕ್ರವರ್ತಿಯು ಸೂರ್ಯೋದಯದ ಸಮಯದಲ್ಲಿ ಎದ್ದು ದೇವರ ಪೂಜೆಯನ್ನು ಮಾಡಿ , ಆಸ್ಥಾನಕ್ಕೆ ಬಂದು ನಡೆಸಿದ ಒಡೋಲಗ ಬಹಳ ವೈಭವಯುತವಾಗಿತ್ತು . ಭರತಚಕ್ರವರ್ತಿಯ ಆಸ್ಥಾನ ಭವನವು ನವರತ್ನ ಹಾಗೂ ಚಿನ್ನದಿಂದ ನಿರ್ಮಿತವಾಗಿತ್ತು . ಸ್ವರ್ಗ ಲೋಕದಲ್ಲಿ ದೇವೇಂದ್ರನು ರತ್ನಪುಷ್ಪಕ ಸಿಂಹಾಸನದಲ್ಲಿ ಶೋಭಿಸುವಂತೆ ಆಸ್ಥಾನದಲ್ಲಿ ಕಾಂತಿಯಿಂದ ಶೋಭಿಸಿದನು . ' ಆಗಸದಲ್ಲಿ ತೇಲುವ ಬಿಳಿ ಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ ಚಂದ್ರನೋ ಸುರ್ಯನೋ ಎಂಬಂತೆ ' ವಿಧವಿಧವಾಗಿ ಪ್ರಕಾಶಿಸುತ್ತಿರುವ ಉದ್ದವಾದ ಚಾಮರಗಳ ಸಾಲಿನ ಹಿಂದೆ ಅವನು ಸಭಿಕರಿಗೆ ಕಾಣುತ್ತಿದ್ದನು . ಆಸ್ಥಾನದಲ್ಲಿ ನೆರೆದಿದ್ದ ಸಭಿಕರೆಲ್ಲ ' ತಾವರೆಯು ಸೂರ್ಯನನ್ನು ನೋಡುವಂತೆ , ನೀಲಿ ತಾವರೆ ( ನೈದಿಲೆ ) ಯು ಚಂದ್ರನನ್ನು ನೋಡುವಂತೆ ಅವನನ್ನು ನೋಡಲು ಕಾತುರದಿಂದ ಮೈಮರೆತು ಕಾಯುತ್ತಿದ್ದರು .

## ಈ ] ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ .

**1.** " ಚಂದಿರನೋ ಭಾಸ್ಕರನೋಯೆಂಬಂತೆ "

kannadapdf.com

ಉತ್ತರ : ಆಯ್ಕೆ : - ಈ ವಾಕ್ಯವನ್ನು ರತ್ನಾಕರವರ್ಣಿಯ ' ಭರತೇಶ ವೈಭವ ' ಕೃತಿಯಿಂದ ತೆಗೆದುಕೊಳ್ಳಲಾಗಿರುವ ' ಸಿರಿಯನಿನ್ನೇನ ಬಣ್ಣಿಪೆನು ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ . ಸಂದರ್ಭ : ಭರತ ಚಕ್ರವರ್ತಿಯು ಆಸ್ಥಾನದಲ್ಲಿ ಕಾಂತಿಯಿಂದ ಕಂಗೊಳಿಸುತ್ತಿದ್ದ ದೃಶ್ಯವನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಮಾತನ್ನು ಹೇಳಿದ್ದಾನೆ . ಚಾಮರಗಳ ಸಾಲಿನ ಹಿಂದೆ ಸಿಂಹಾಸನದಲ್ಲಿ ಕುಳಿತಿದ್ದ ಭರತ ಚಕ್ರವರ್ತಿಯು ' ಆಗಸದಲ್ಲಿ ತೇಲುವ ಬಿಳಿ ಮೋಡಗಳ ಹಿಂದೆ ಆಗಾಗ ತೋರಿ ಮರೆಯಾಗುವ ಚಂದ್ರನೋ ಸೂರ್ಯನೋ ' ಎಂಬಂತೆ ಕಂಗೊಳಿಸಿದನು . ಸ್ವಾರಸ್ಯ : ಬಿಳಿ ಬಣ್ಣದ ಚಾಮರಗಳನ್ನು ಮೋಡವಾಗಿಯೂ ಭರತೇಶನನ್ನು ಸೂರ್ಯ - ಚಂದ್ರರಾಗಿಯೂ ಕಲ್ಪಿಸಿರುವುದು ಸ್ವಾರಸ್ಯಪೂರ್ಣವಾಗಿದೆ .

**2. “ ಕನ್ನಡದೊಳಗೊಂದು ಕಥೆಯ ಪೇಳುವೆನು ”**

ಉತ್ತರ : ಆಯ್ಕೆ : - ಈ ವಾಕ್ಯವನ್ನು ರತ್ನಾಕರವರ್ಣಿಯ ' ಭರತೇಶ ವೈಭವ ' ಕೃತಿಯಿಂದ ತೆಗೆದುಕೊಳ್ಳಲಾಗಿರುವ ' ಸಿರಿಯನಿನ್ನೇನ ಬಣ್ಣಿಪೆನು ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ . ಸಂದರ್ಭ : ಕವಿ ರತ್ನಾಕರವರ್ಣಿಯು ತಾನು ಕಾವ್ಯ ಬರೆಯಲು ಕಾರಣ ಮತ್ತು ಪ್ರೇರಕವಾದ ಅಂಶಗಳನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾನೆ . ತನಗೆ ಧ್ಯಾನ ಮಾಡುವುದು ಬೇಸರವಾದಾಗ ತನ್ನ ಧರ್ಮ ದೇವತೆಯನ್ನು ಮೊದಲಾಗಿಟ್ಟುಕೊಂಡು ಕನ್ನಡದಲ್ಲಿ ಕಥೆ ಬರೆಯುವುದಾಗಿ ಹೇಳಿದ್ದಾನೆ .

ಸ್ವಾರಸ್ಯ : ಇಲ್ಲಿ ಕವಿಯು ತನಗೆ ಧ್ಯಾನಮಾಡಲು ಬೇಸರವಾದರೂ ಆ ಧ್ಯಾನವನ್ನು ಕಾವ್ಯರಚನೆಯ ರೂಪದಲ್ಲಿ ಮಾಡುವ ಅಭಿಪ್ರಾಯವನ್ನು ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಿದ್ದಾನೆ .

**3. “ ಶ್ರೀ ವಿಲಾಸವನೇನನೆಂಬೆ ? ”**

ಉತ್ತರ : ಆಯ್ಕೆ : - ಈ ವಾಕ್ಯವನ್ನು ರತ್ನಾಕರವರ್ಣಿಯ ' ಭರತೇಶ ವೈಭವ ' ಕೃತಿಯಿಂದ ತೆಗೆದುಕೊಳ್ಳಲಾಗಿರುವ ' ಸಿರಿಯನಿನ್ನೇನ ಬಣ್ಣಿಪೆನು ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ . ಸಂದರ್ಭ : ಕವಿ ರತ್ನಾಕರವರ್ಣಿಯು ಭರತ ಚಕ್ರವರ್ತಿಯು ಆಸ್ಥಾನಕ್ಕೆ ಆಗಮಿಸುತ್ತಿದ್ದ ವೈಭವದ ಬಗ್ಗೆ ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾನೆ . ಭರತ ಚಕ್ರವರ್ತಿಯು ಒಂದು ದಿನ ಸೂರ್ಯೋದಯದಲ್ಲಿ ಎದ್ದು ದೇವರ ಪೂಜೆಯನ್ನು ಮಾಡಿ , ಆಸ್ಥಾನಕ್ಕೆ ಬಂದು ಒಡೋಲಗ ನಡೆಸಿದ ಆ ಒಂದು ವೈಭವವನ್ನು ಏನೆಂದು ವರ್ಣಿಸಲಿ ಎಂದು ಕವಿ ಹೇಳುತ್ತಾನೆ .

ಸ್ವಾರಸ್ಯ : ಭರತ ಚಕ್ರವರ್ತಿಯ ರಾಜ ವೈಭವ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ .

## ಈ ) ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ .

1. ಬಿನ್ನಹ : ಅರಿಕೆ :: ವಿಭು :………..

2 . ಹೊಗಳು : ತೆಗಳು :: ಕಾರ್ಮುಗಿಲ್ :……………….

3. ಭರತ : ಅಯೋಧ್ಯೆ :: ಬಾಹುಬಲಿ :…………..

4. ನೀಲಾಂಬುಜ : ನೀಲ + ಅಂಬುಜ :: ಚಕ್ರೇಶ್ವರ :……………….



| Download: Kannadapdf.com | https://kannadapdf.com/ |
|---|---|

## 9ನೇ ತರಗತಿ ಕನ್ನಡ ಸಿರಿಯನಿನ್ನೇನ ಬಣ್ಣಿಪೆನು ನೋಟ್ಸ್ - kannadapdf.com

ಸರಿ ಉತ್ತರಗಳು

1. ರಾಜ

2. ಬೆಳ್ಳಗಿಲ್

3. ಪೌದನಪುರ

4. ಚಕ್ರ + ಈಶ್ವರ

kannadaPdf.com